ಸಲ ನಾಗಪುರದಲ್ಲಿ ನಡೆಸುತ್ತಾರೆ. ಹುಬ್ಬಳ್ಳಿ ಧಾರವಾಡ ಕಾರ್ಪೋರೇಷನ್ ಏರಿಯಾದ ಶಹರು ಬೆಂಗಳೂರನ್ನು ಬಿಟ್ಟರೆ ರಾಜ್ಯದಲ್ಲಿ ಎರಡನೆಯ ದೊಡ್ಡ ಶಹರ್ ಆಗಿದೆ ಕಾರ್ಪೋರೇಷನ್ ಆಗಿದೆ. ಆದುದರಿಂದ ವರ್ಷಕ್ಕೊಮ್ಮೆ ಅಧಿವೇಶನವನ್ನು ಅಲ್ಲಿ ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡಬೇಕು. ಇದರಿಂದ ಉತ್ತರ ಭಾಗದ ಜನರಿಗೆ ಸಹಾಯವಾಗುತ್ತದೆ. ನಮ್ಮ ರಾಜ್ಯದಲ್ಲಿ ನೀರಿನ ಅಭಾವ ವಿಪರೀತವಾಗಿದೆ. ನಮ್ಮ ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ 15 ದಿವಸದ ಹಿಂದೆ ಸರಕಾರ 100 ಬೋರ್‌ವೆಲ್ ಮಂಜೂರು ಮಾಡಿದೆ. ಅದು ಸಾಲದು ಅದಕ್ಕೋಸ್ಕರ ಇನ್ನೂ ಒಂದು ನೂರು ಬೋರ್‌ವೇಲ್‌ಗಳನ್ನು ಸ್ಯಾಂಕ್ಷನ್ ಮಾಡಿ ನೀರಿನ ಬವಣೆ ಏನು ಎದ್ದಿದೆ ಅದನ್ನು ಮಾಡುವುದಕ್ಕೆ ತಾವು ಸಹಾಯ ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಹೇಳಿಕೆ

ಯುಗಾದಿ ಹಬ್ಬದ ಪ್ರಯುಕ್ತ ಬೆಂಗಳೂರು ನಗರದಲ್ಲಿ ಪಡಿತರ ಚೀಟಿಯೊಂದಕ್ಕೆ 3 ಕೆ.ಜಿ. ಗೋಧಿಯನ್ನು ವಿಶೇಷ ಹೆಚ್ಚುವರಿ ನೀಡುವುದು.

+ ಶ್ರೀ ಟಿ.ಎ. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಆಳುವ ಮತ್ತು ಪ್ರತಿಪಕ್ಷದ ಸನ್ಮಾನ್ಯ ಸದಸ್ಯರುಗಳು ಬರಲಿರುವ ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದ ಜನತೆಗೆ ವಿಶೇಷವಾಗಿ ಪಾಮೋಲೀನ್ ಎಣ್ಣೆ ಸಕ್ಕರೆ ಮತ್ತಿತರ ಆಹಾರ ವಸ್ತುಗಳನ್ನು ಸರಕಾರ ಏತಕ್ಕೆ ನೀಡಿಲ್ಲ ಎಂದು ಪ್ರಸ್ತಾಪಿಸಿದ್ದಾರೆ. ಈ ಒಂದು ಹೇಳಿಕೆಯನ್ನು ಮಾಡುವುದಕ್ಕೆ ಮುಂಚಿತವಾಗಿ ಹಿನ್ನೆಲೆಯನ್ನು ಪ್ರಸ್ತಾಪ ಮಾಡಿದರೆ ಮಾನ್ಯ ಸದಸ್ಯರಿಗೆ ನಿಜವಾದ ನಿಲುವು ಏನಿದೆ ಎಂದು ಅರ್ಥವಾಗುತ್ತದೆ. ಯುಗಾದಿ ಹಬ್ಬಕ್ಕಾಗಿ ಹೆಚ್ಚಾಗಿ ತಾಳೆಎಣ್ಣೆ ಮತ್ತು ಸಕ್ಕರೆ ಬಿಡುಗಡೆ ಮಾಡಬೇಕೆಂದು ನಾವು ಕೇಂದ್ರ ಸರಕಾರಕ್ಕೆ ಕೇಳಿದ್ದೆವು. ಪಾಮೋಲಿನ್ ಎಣ್ಣೆ ಪಾಶ್ಚಿಮಾತ್ಯ ದೇಶಗಳಿಂದ ಬರಬೇಕಾಗಿದೆ ಸಾಕಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ ಬಂದು ಕೂಡಲೇ ಎಣ್ಣೆಯನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು.

ಸಕ್ಕರೆ ಕೊಡತಕ್ಕ ವಿಚಾರದಲ್ಲಿ ನಿಮ್ಮ ರಾಜ್ಯಕ್ಕೆ ಇದುವರೆಗೆ ಎಷ್ಟು ಕೊಟ್ಟಿದ್ದೇವೆ ಅದಕ್ಕಿಂತ ಹೆಚ್ಚು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ. ಮುಂದೆ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರು. ಮಾನ್ಯ ಸದಸ್ಯರು ಒಂದು ಕೂಗನ್ನು ಗಮನಿಸಿ ತಮ್ಮ ವಾದಕ್ಕೆ ಪ್ರತಿಪಾದನೆಗೆ ಬೆಲೆ ಕೊಡಬೇಕೆಂದು ನಮ್ಮ ಅಧಿಕಾರಿಗಳನ್ನು ಕರೆಸಿ ನಿನ್ನೆಯಿಂದ ಇದುವರೆಗೆ ಮಾನ್ಯ ಸದಸ್ಯರ ಮಾತಿಗೆ ಬೆಲೆ ಕೊಡಬೇಕು ಯುಗಾದಿ ಹಬ್ಬಕ್ಕಾಗಿ ರಾಜ್ಯ ಜನತೆಗೆ ಕಿಂಚತ್ತಾದರೂ ಉಡುಗೊರೆ ಕೊಡಬೇಕೆಂದು ಹೇಳಿ....

ಶ್ರೀ ವಾಟಾಳ್ ನಾಗರಾಜ್: ಉಡುಗೊರೆ ಎಂದರೆ ಉಚಿವಾಗಿ ಕೊಡುತ್ತಿದ್ದೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ: ಉಚಿತವಾಗಿ ಅಲ್ಲ ವಿಶೇಷವಾದ ರೀತಿಯಲ್ಲಿ ಕೊಡುತ್ತಿದ್ದೇವೆ. ಆದುದರಿಂದ ಮಾನ್ಯ ಸಭಾಧ್ಯಕ್ಷರೇ ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಓದುತ್ತೇನೆ.

ಮಾರ್ಚಿ 17 ರಂದು ಬರುವ ಯುಗಾದಿ ಹಬ್ಬದ ಪ್ರಯುಕ್ತ ಬೆಂಗಳೂರು ನಗರದಲ್ಲಿ ಪಡಿತರ ಚೀಟಿಯೊಂದಕ್ಕೆ 3 ಕೆ.ಜಿ. ಗೋಧಿಯನ್ನು ವಿಶೇಷ ಹೆಚ್ಚುವರಿಯಾಗಿ

ಬಿಡುಗಡೆ ಮಾಡಲಾಗಿದೆ. ಅಂದರೆ ಈಗ 12 ಕೆ.ಜಿ.ಗೆ ಬದಲಾಗಿ ಪ್ರತಿಯೊಂದು ಕಾರ್ಡಿಗೂ 15 ಕೆ.ಜಿ. ಗೋಧಿಯನ್ನು ಪಡೆಯಬಹುದು.

ಇದೇ ಪ್ರಕಾರವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೇಸರಿ ಕಾರ್ಡುದಾರರಿಗೆ ಮತ್ತು ಪಟ್ಟಣ ಪ್ರವೇಶದವರಿಗೂ 3ಕೆ.ಜಿ. ಹೆಚ್ಚಿನ ಗೋಧಿಯನ್ನು ಕೊಡಲು ಜಿಲ್ಲಾಧಿಕಾರಿಗಳವರಿಗೆ ಆದೇಶ ನೀಡಲಾಗಿದೆ.

ಇದು ಅಲ್ಲದೆ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪಾಮೋಲಿನ್ ಎಣ್ಣೆ ಹಾಗೂ ಸಕ್ಕರೆಯನ್ನು ಬಿಡುಗಡೆ ಮಾಡಲು ಬೇಡಿಕೆಯನ್ನು ಸಲ್ಲಿಸಲಾಗಿದೆ. ಈ ಪ್ರಮಾಣವು ಬಿಡುಗಡೆಯಾದ ತಕ್ಷಣ ನಮ್ಮ ಕಾರ್ಡುದಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಂಚುವ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಎಂ. ಮಹದೇವ್ : ಹಳ್ಳಿ ಪ್ರದೇಶಗಳಿಗೆ ಏನೂ ಇಲ್ಲ. ಬೆಂಗಳೂರು ಮತ್ತು ಮೈಸೂರಿಗೆ ಮಾತ್ರ ಕೊಟ್ಟರೆ ಹಳ್ಳಿಗಳ ಪರಿಸ್ಥಿತಿ ಏನು ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಗ್ರಾಮಾಂತರ ಪ್ರದೇಶಗಳಿಗೂ ಇದನ್ನು ವಿಸ್ತರಣೆ ಮಾಡಬೇಕು. ಬೆಂಗಳೂರು ನಗರಕ್ಕೆ ಮಾತ್ರ ಸೀಮಿತ ಮಾಡಬೇಡಿ.

(ಗೊಂದಲ)

ಶ್ರೀ ಎಂ ಮಹದೇವ್ : ಗ್ರಾಮಾಂತರ ಪ್ರದೇಶಗಳಿಗೆ ಏನು ಮಾಡಿದ್ದೀರಿ ಸ್ವಾಮಿ

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಯುಗಾದಿ ಹಬ್ಬ ಬೆಂಗಳೂರು ಮತ್ತು ನಗರಪ್ರದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ದೊಡ್ಡ ಹಬ್ಬವಾಗಿ ಆಚರಿಸುತ್ತಾರೆ. ಆದ್ದರಿಂದ ದಯಮಾಡಿ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಕೊಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ ಈ ವಿಚಾರವನ್ನು ನಾನು ಬೆಳಿಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಮೊಯ್ಲಿಯವರು ಇವತ್ತು ಸಾಯಂಕಾಲದೊಳಗಾಗಿ ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದರು ಆದರೆ ಮಾನ್ಯ ನರಸಿಂಹಮೂರ್ತಿಯವರು ಆ ದಿನ ಇನ್ಸ್‌ಪೆಕ್ಷನ್‌ಗೆ ಹೋಗಬೇಕೆಂದು ನನ್ನನ್ನು ಕರೆದ ಮೇಲೆ ಅವರು ಇವತ್ತೇ ಈ ಸದನಕ್ಕೆ ಬಂದಿರುವುದು ಹೇಳಿಕೆ ಕೊಟ್ಟಿದ್ದಾರೆ ಬಹಳ ಸಂತೋಷ ನಾನು ಸಕ್ಕರೆ ಮತ್ತು ಎಣ್ಣೆ ಕೊಡಬೇಕು ಎಂದು ನಾವು ಕೇಳಿದ್ದೆವು. ಮಾನ್ಯ ವಾಟಾಳ್ ನಾಗರಾಜ್‌ರವರು ಯುಗಾದಿಗೆ ಬೇವು ಸಿಕ್ಕಿತು ಬೆಲ್ಲ ಇಲ್ಲ ಎಂದು ಹೇಳಿದರು. ನಾವು ಸಕ್ಕರೆ ಕೊಡಿ ಎಂದು ಕೇಳಿದೆವು. ಅದು ಇಲ್ಲ ನನಗೆ ಗೊತ್ತಿರುವಹಾಗೆ ಇವರು ಕೊಡುತ್ತಿರುವುದು ಮುಗ್ಗಲು ಗೋಧಿ ಈ ಮುಗ್ಗಲು ಗೋಧಿಯನ್ನು 3 ಕೆ.ಜಿ. ಜಾಸ್ತಿ ಮಾಡಿದರೆ ಏನೂ ಉಪಯೋಗ ಇಲ್ಲ. ದಯವಿಟ್ಟು ಕ್ಷಮಿಸಿ.

ಶ್ರೀ ಬಿ.ಎಚ್. ಬನ್ನಿಕೋಡ್ : ಈ ಸರ್ಕಾರದಲ್ಲಿ ನೀರು ಇಲ್ಲ ಎಣ್ಣೆ ಇಲ್ಲ

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ : ಕೇಂದ್ರದಿಂದ ನಮಗೆ 1600 ಮೆಟ್ರಿಕ್‌ಟನ್ ಎಣ್ಣೆ ಬಂದಿದೆ. ನಾವು ಇದನ್ನು ಬೆಂಗಳೂರು ನಗರ ಮತ್ತು ಪಟ್ಟಣ ಪ್ರದೇಶಗಳಿಗೆ

1 ಕೆ.ಜಿ. ಪ್ರಮಾಣದಲ್ಲಿ ಕೊಡಬೇಕು ಗ್ರಾಮಾಂತರ ಪ್ರದೇಶಗಳಲ್ಲಿ ಅರ್ಧ ಕೆ.ಜಿ. ಪ್ರಮಾಣದಲ್ಲಿ ಕೊಡಬೇಕೆನ್ನುವ ತೀರ್ಮಾನ ಮಾಡಿ ಹಂಚಿಕೆ ಮಾಡಿದ್ದೇವೆ. ಮಾನ್ಯ ಸದಸ್ಯರ ಕೂಗು ಏನು ಇದೆ ಆ ಪ್ರಕಾರ ಹೆಚ್ಚು ಮಾಡಬೇಕಾದರೆ ಕೇಂದ್ರ ಸರ್ಕಾರದಿಂದ ನಮಗೆ ಎಣ್ಣೆ ಬಂದ ಹೊರತು ನಾವು ಕೊಡಲು ಸಾಧ್ಯವಿಲ್ಲ.

(ಗೊಂದಲ)

ಶ್ರೀ ಎ.ಬಿ. ಜಕನೂರು: ಗ್ರಾಮಾಂತರ ಪ್ರದೇಶಗಳಿಗೆ ಕಡಿಮೆ ಸಕ್ಕರೆ ಪಟ್ಟಣ ಪ್ರದೇಶಗಳಿಗೆ ಜಾಸ್ತಿ ಸಕ್ಕರೆ ಕೊಡುತ್ತೀರಿ ಈ ತಾರತಮ್ಯವನ್ನು ನಿವಾರಣೆ ಮಾಡಿ.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಮ್ಮ ಸರ್ಕಾರ ಬಂದ ಮೇಲೆ ಹಿಂದಿನ ಸರ್ಕಾರದ ನೀತಿ ಏನು ಇತ್ತೊ ಅದನ್ನೇ ನಾವು ಮುಂದುವರಿಸಿಕೊಂಡು ಬಂದಿದ್ದೇವೆ. ಬೇರೆ ವ್ಯವಸ್ಥೆ ಏನೂ ಮಾಡಿಲ್ಲ ಗ್ರಾಮಾಂತರ ಪ್ರದೇಶಗಳಿಗೂ ಪಟ್ಟಣ ಪ್ರದೇಶಗಳಿಗೂ ಇರುವ ತಾರತಮ್ಯವನ್ನು ನಿವಾರಣೆ ಮಾಡಿ ಎಂಬ ವಾದ ಇದೆ. ಖಂಡಿತವಾಗಿ ಸರ್ಕಾರ ಇದನ್ನು ಪರಿಶೀಲನೆ ಮಾಡಿ ಗ್ರಾಮಾಂತರ ಪ್ರದೇಶದ ಜನತೆಗೂ ಕೂಡ ಸಾಮಾಜಿಕವಾಗಿ ನ್ಯಾಯಬದ್ಧವಾಗಿ ಕೊಡಲು ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಉಪಾಧ್ಯಾಕ್ಷರು : ಸ್ಟೇಟ್‌ಮೆಂಟ್ ಮೇಲೆ ಚರ್ಚೆ ಇಲ್ಲ. ವಾಟಾಳ್ ನಾಗರಾಜ್‌ರವರೇ ತಾವು ಮಾತನಾಡಿ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿದಿದ್ದು)

5.30 ಪಿ.ಎಂ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾವು ಈ ಸದನಕ್ಕೆ ಬಂದ ಮೇಲೆ ಇಲ್ಲಿಯವರೆಗೂ 3 ಜನ ರಾಜ್ಯಪಾಲರ ಭಾಷಣವನ್ನು ಕೇಳಿದ್ದೇನೆ. ಎಲ್ಲಾ ರಾಜ್ಯಪಾಲರ ಭಾಷಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಧಾಟಿಯೆಲ್ಲಾ ಒಂದೇ. ಮಾನ್ಯ ಬಂಗಾರಪ್ಪನವರ ಸರ್ಕಾರ ಧಾಟಿಯಲ್ಲಿ ಸ್ವಲ್ಪ ನಾಜೂಕನ್ನು ತೋರಿಸಿದ್ದಾರೆ. ಇದರಲ್ಲಿ ಸ್ವಲ್ಪ ಪ್ರಚಾರ ತಂತ್ರವನ್ನು ಉಪಯೋಗಿಸಿದ್ದಾರೆ. ಮಾನ್ಯ ಬಂಗಾರಪ್ಪನವರು ಮೊದಲಿನಿಂದಲೂ ಆ ಪ್ರಚಾರ ತಂತ್ರದಲ್ಲಿ ಬಹಳ ಪ್ರವೀಣರು, ಅದರಲ್ಲಿ ಎರಡನೆ ಅಭಿಪ್ರಾಯವಿಲ್ಲ. ರಾಜ್ಯದ ನಾಯಕತ್ವದ ಬಗ್ಗೆ ಹೇಳುವುದಾದರೆ, ಕರ್ನಾಟಕ ರಾಜ್ಯದ ನಾಯಕತ್ವ ಒಂದು ಕಾಲದಲ್ಲಿ ಬಹಳ ಉನ್ನತ ಮಟ್ಟಕ್ಕೆ ಹೋಗಿತ್ತು. ಆಗ ದೆಹಲಿಯ ದೊರೆಗಳು ಕರ್ನಾಟಕದ ನಾಯಕತ್ವಕ್ಕೆ ಹೆದರುತ್ತಿದ್ದರು. ಇವತ್ತು ನಾವು ಅವರನ್ನು ನೆನೆದುಕೊಳ್ಳಬೇಕು. ಈ ವಿಧಾನ ಸೌಧವನ್ನು ಕಟ್ಟಿಸಿದಂಥ ಕೆಂಗಲ್ ಹನುಮಂತಯ್ಯನವರನ್ನು ಕಂಡರೆ ಕೇಂದ್ರ ಹೆದರುತ್ತಿತ್ತು. ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಕೇಂದ್ರ ಹೆದರುತ್ತಿತ್ತು. ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲೂ ಕೇಂದ್ರ ನಿಜವಾಗಲೂ ಹೆದರುತ್ತಿತ್ತು. ಸ್ವಲ್ಪ ಇತ್ತೀಚಿನ ದಿನಗಳಲ್ಲಿ ರಾಜಕೀಯದ ವಾದ ವಿವಾದಗಳು ಏನೇ ಇದ್ದರೂ ವೀರೇಂದ್ರ ಪಾಟೀಲರ ಮತ್ತು ಹೆಗಡೆಯವರ ಮಾತು ಇಲ್ಲಿ ತರಬೇಕಾಗಿದೆ.

ಹಿಂದೆ ಯಾವ ತರಹ ಇತ್ತೆಂದರೆ, ಕರ್ನಾಟಕದ ನಾಯಕತ್ವದ ಪ್ರಶ್ನೆ ಬಂದಾಗ ಈ ಜನ ನಿಜವಾಗಲೂ ದೆಹಲಿಯನ್ನು ಕರ್ನಾಟಕ್ಕೆ ತಂದಿದ್ದರು. ಆದರೆ ಇವತ್ತು ಕರ್ನಾಟಕ ದೆಹಲಿಗೆ ಹೋಗುತ್ತಿದೆ. ಇವತ್ತು ಈ ಪರಿಸ್ಥಿತಿ ಉದ್ಭವಾಗಿದೆ. ಕರ್ನಾಟಕದಲ್ಲಿ ನಾಯಕತ್ವದ ಅಭಾವ ತೀವ್ರವಾಗಿದೆ. ನಮ್ಮ ಕರ್ನಾಟಕವನ್ನು ಒಂದಲ್ಲ ಒಂದು ರೀತಿಯಲ್ಲಿ ಆಳುತ್ತಿರತಕ್ಕಂಥವರು,ಸೂತ್ರವನ್ನು ಹಿಡಿದಿರತಕ್ಕಂಥವರು ಕೇಂದ್ರದ ಒಂದಲ್ಲಾ